# ಕುಮಾರಣ್ಣನ ಜನಪ್ರಿಯತೆ ಮತವಾಗಿ ಪರಿವರ್ತಿಸಲು ಶ್ರಮಿಸಿ

**ಹುಳಿಯಾರು**

ಅಮೇರಿಕ ಅಧ್ಯಕ್ಷ ಸ್ಥಾನಕ್ಕೆ ನೇರ ಚುನಾವಣೆ ನಡೆಯುವ ರೀತಿ ರಾಜ್ಯ ಮುಖ್ಯಮಂತ್ರಿ ಸ್ಥಾನಕ್ಕೆ ನೇರ ಚುನಾವಣೆ ನಡೆದರೆ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವುದು ನಿಶ್ಚಿತ ಎಂದು ಜಾತ್ಯತೀತ ಜನತಾದಳದ ಬೂತ್ ಕಮಿಟಿ ರಚನಾ ಸಮಿತಿ ರಾಜ್ಯಾಧ್ಯಕ್ಷರೂ ಆದ ಚಿಕ್ಕನಾಯಕನಹಳ್ಳಿ ಶಾಸಕ ಸಿ.ಬಿ.ಸುರೇಶ್ ಬಾಬು ಅಭಿಪ್ರಾಯಪಟ್ಟರು.

ಹುಳಿಯಾರಿನ ಕಂಕಾಳಿ ಸಮುದಾಯ ಭವನದಲ್ಲಿ ಬುಧವಾರ ಏರ್ಪಡಿಸಿದ್ದ ಜೆಡಿಎಸ್ ಕಾರ್ಯಕರ್ತರ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.



ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳು ಇದೂವರೆವಿಗೂ ರಾಜ್ಯದ ಮುಂದಿನ ಸಿಎಂ ಬಗ್ಗೆ ನಡೆಸಿದ ಎಲ್ಲಾ ಸಮೀಕ್ಷೆಯಲ್ಲೂ ಎಚ್.ಡಿ.ಕುಮಾರಸ್ವಾಮಿ ಮುಂಚೂಣಿಯಲ್ಲಿದ್ದಾರೆ. ಇದರರ್ಥ 20 ತಿಂಗಳ ಕುಮಾರಸ್ವಾಮಿ ಆಡಳಿತ ರಾಜ್ಯದ ಜನತೆಗೆ ಇಷ್ಟವಾಗಿದ್ದು ಮತ್ತೊಮ್ಮೆ ಕುಮಾರಣ್ಣ ಅವರನ್ನೇ ಮುಖ್ಯಮಂತ್ರಿ ಮಾಡುವ ಬಯಕೆಯಿದೆ. ಹಾಗಾಗಿ ಕುಮಾರಣ್ಣ ಅವರೇ ಮುಖ್ಯಮಂತ್ರಿ ಆಗಬೇಕೆಂಬ ಬಯಕೆಯಿದ್ದವರೆಲ್ಲರೂ ಜೆಡಿಎಸ್‌ಗೆ ಗೆಲ್ಲಿಸಲು ಪಣ ತೊಡುವಂತೆ ಕರೆ ನೀಡಿದರು.

**ಮತವಾಗಿ ಪರಿವರ್ತಿಸಲು ಬೂತ್ ಕಮಿಟಿ**

ಕುಮಾರಣ್ಣ ಅವರ ಜನಪ್ರಿಯತೆಯನ್ನು ಮತಗಳಾಗಿ ಪರಿವರ್ತಿಸುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಬೂತ್ ಕಮಿಟಿ ರಚಿಸಲು ನಿರ್ಧರಿಸಲಾಗಿದೆ. ಮಹಿಳಾ, ಅಂಗವಿಕಲ, ಮಂಗಳಮುಖಿ, ನಿವೃತ್ತ ನೌಕರರು, ದಲಿತರು, ಅಲ್ಪಸಂಖ್ಯಾತರು ಹೀಗೆ 21 ವಿಭಾಗಗಳಲ್ಲೂ ಬೂತ್ ಕಮಿಟಿ ರಚಿಸಿ ಎಲ್ಲಾ ಜಾತಿಯವರಿಗೂ ಸ್ಥಾನಮಾನ ನೀಡಲಾಗುವುದು. ಅದರಲ್ಲೂ ಜಾತಿ-ಹಣಕ್ಕೆ ಕಟ್ಟು ಬೀಳದೆ ಸಂಘಟನಾ ಚತುರರನ್ನು ಗುರುತಿಸಿ ಅಧಿಕಾರ ಕೊಡುವುದಿದ್ದು ಕಾರ್ಯಕರ್ತರು ತಮ್ಮತಮ್ಮ ಚತುರತೆಯನ್ನು ಪ್ರದರ್ಶಿಸುವಂತೆ ಕಿವಿ ಮಾತು ಹೇಳಿದರು.

**ಕಾರ್ಯಕರ್ತರಿಗೆ ಸ್ಮಾರ್ಟ್ ಕಾರ್ಡ್**

ರಾಜ್ಯ, ಜಿಲ್ಲೆ, ತಾಲ್ಲೂಕು, ಪಂಚಾಯ್ತಿ, ಬೂತ್ ಹೀಗೆ ವಿವಿಧ ಹಂತಗಳಲ್ಲೂ ಕಮಿಟಿಗಳನ್ನು ರಚಿಸಿ ಎಲ್ಲರಿಗೂ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಈ ಯೋಜನೆಯನ್ನು ಪ್ರಾಯೋಗಿಕವಾಗಿ ಚಿಕ್ಕನಾಯ್ಕನಹಳ್ಳಿಯಲ್ಲಿ ಜಾರಿಗೆ ತರುವುದಿದ್ದು ಇನ್ನೆರಡು ತಿಂಗಳಲ್ಲಿ ಎಲ್ಲಾ ಕಮಿಟಿಗಳನ್ನು ರಚಿಸಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರನ್ನು ಆಹ್ವಾನಿಸಿ ಸ್ಮಾರ್ಟ್ ಕಾರ್ಡ್ ವಿತರಿಸಲಾಗುವುದು. ಬೂತ್ ಕಮಿಟಿಯನ್ನು ಚುನಾವಣೆಗೆ ಮಾತ್ರವೇ ಬಳಕೆ ಮಾಡಿಕೊಳ್ಳದೆ ಸಾಮಾಜಿಕ ಅಧ್ಯಯನ ನಡೆಸಿ ಅರ್ಹರಿಗೆ ಸರ್ಕಾರದ ಸೌಲಭ್ಯ ಕಲ್ಪಿಸುವ, ಸರ್ಕಾರದ ಜನ ವಿರೋಧಿ ಧೋರಣೆ ವಿರುದ್ಧ ಪ್ರತಿಭಟಿಸುವುದು ಸೇರಿದಂತೆ ಸಮಾಜಮುಖಿ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದು ಎಂದರು.

**ನಾಯಕರನ್ನು ರೂಪಿಸುವ ಕಾರ್ಖಾನೆ**

ಜೆಡಿಎಸ್ ಸಾಮಾನ್ಯ ಕಾರ್ಯಕರ್ತನಿಗೆ ಶಕ್ತಿ ಕೊಟ್ಟು ನಾಯಕರನ್ನಾಗಿ ರೂಪಿಸುವ ಕಾರ್ಖಾನೆಯಾಗಿದೆ. ಈಗಿನ ಕಾಂಗ್ರೆಸ್ ಸರ್ಕಾರದ ಅರ್ಧದಷ್ಟು ಮಂತ್ರಿಗಳು ಜೆಡಿಎಸ್‌ನಲ್ಲಿ ಇದ್ದವರು. ಜೆಡಿಎಸ್ ಶಕ್ತಿ ಬಳಸಿಕೊಂಡು ನಾಯಕರಾದವರು. ಅಲ್ಲದೆ ಜಾತೀಯತೆ ಮಾಡದೆ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಪಕ್ಷ ಸಹ ಇದಾಗಿದ್ದು ಕುರುಬರು, ಮುಸ್ಲಿಂ, ಲಿಂಗಾಯಿತ, ದಲಿತರು ಹೀಗೆ ಎಲ್ಲಾ ಜಾತಿಗೂ ಒಬ್ಬೊಬ್ಬ ರಾಜಕೀಯ ನಾಯಕನನ್ನು ಬೆಳೆಸಿದೆ. ಹಾಗಾಗಿ ರಾಜಕೀಯ ಪ್ರವೇಶ ಮಾಡಬೇಕೆನ್ನುವ ಯುವಕರು ಜೆಡಿಎಸ್ ಮೂಲಕ ಪ್ರವೇಶ ಪಡೆದರೆ ಉತ್ತಮ ಭವಿಷ್ಯ ಇರುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಪಂ ಸದಸ್ಯರುಗಳಾದ ಸೋಮನಹಳ್ಳಿಕಲ್ಲೇಶ್, ರಾಮಚಂದ್ರಯ್ಯ, ತಾಪಂ ಸದಸ್ಯರುಗಳಾದ ಎಚ್.ಎನ್.ಕುಮಾರ್, ಕಲ್ಯಾಣಿಬಾಯಿ, ಪ್ರಸನ್ನಕುಮಾರ್, ಯತೀಶ್, ಚಿ.ನಾ.ಹಳ್ಳಿ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಶಿವಪ್ರಕಾಶ್, ಪ್ರಧಾನ ಕಾರ್ಯದರ್ಶಿ ಸದಾಶಿವು, ಗ್ರಾಪಂ ಉಪಾಧ್ಯಕ್ಷ ಗಣೇಶ್, ತಾಲ್ಲೂಕು ಯುವ ಜೆಡಿಎಸ್ ಅಧ್ಯಕ್ಷ ಗೌಡಿ, ಮುಖಂಡರಾದ ಬೈಜೂಸಾಬ್, ಏಜಾಸ್‌ಪಾಷಾ, ಹಾರೂನ್ ಷರೀಫ್ ಮತ್ತಿತರರು ಉಪಸ್ಥಿತರಿದ್ದರು.

# ಇಪ್ಪಾಡಿ ಗ್ರಾ.ಪಂ.ಗೆ ಇಒ ದಿಢೀರ್ ಭೇಟಿ: ಪಿ.ಡಿ.ಒ ಗೈರು, ಕ್ರಮಕ್ಕೆ ಸೂಚನೆ

**ಕುಣಿಗಲ್**

ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ತಾಲ್ಲೂಕಿನ ಇಪ್ಪಾಡಿ ಗ್ರಾಪಂಗೆ ತಾಪಂ ಇಒ ವಿಜಿಗೌಡ ಅವರು ದಿಢೀರನೇ ಭೇಟಿ ನೀಡಿ ಕಡತಗಳನ್ನು ಪರಿಶೀಲಿಸಿದರು. ಈ ವೇಳೆ, ಅಲ್ಲಿನ ಪಿಡಿಒ ಚಂದ್ರು ಎಂಬುವರು ಗೈರು ಹಾಜರಾಗಿದ್ದು ಕಂಡು ಬಂತು.

ಇದರಿಂದ ಕೆಂಡಮಂಡಲವಾದ ಇಒ, ಅನಧಿಕೃತವಾಗಿ ಗೈರಾಗಿದ್ದ ಚಂದ್ರು ಅವರನ್ನು ದೂರವಾಣಿಯಲ್ಲಿ ತರಾಟೆಗೆ ತೆಗೆದುಕೊಂಡ ಅವರು ಸಾರ್ವಜನಿಕರ ಕೆಲಸ ಕಾರ್ಯವನ್ನು ಬಿಟ್ಟು ಮನಸೋ ಇಚ್ಛೆ ನಡೆದುಕೊಂಡರೆ ಶಿಸ್ತು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.

ಸಾರ್ವಜನಿಕರು ಪಂಚಾಯಿತಿಗೆ ಬಂದು ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಪಡೆಯಲು ಬಂದರೆ ಸಮರ್ಪಕವಾಗಿ ಯಾವುದೇ ಮಾಹಿತಿ ನೀಡುವುದಿಲ್ಲ, 2016-17 ನೇ ಸಾಲಿನಲ್ಲಿ ಶೌಚಾಲಯ ನಿರ್ಮಿಸಲು ಸಾಮಗ್ರಿಗಳನ್ನು ಪೂರೈಸದೆ ದುರುಪಯೋಗ ಮಾಡಿಕೊಂಡಿದ್ದಾರೆ ಎಂದೆಲ್ಲ ಗ್ರಾಮಸ್ಥರು ಇ.ಒ.ಗೆ ದೂರಿದರು.

ಅಲ್ಲದೆ ಗ್ರಾಪಂನಲ್ಲಿ ಇ-ಸ್ವತ್ತು ಖಾತೆ ಮಾಡಿಸಲು ಅರ್ಜಿ ಸಲ್ಲಿಸಿ ತಿಂಗಳು ಕಳೆದರೂ ಪಿಡಿಒ ಕ್ಯಾರೆ ಎಂದಿರಲಿಲ್ಲ, ಅಲ್ಲದೆ, ಸ್ವಚ್ಛ ಭಾರತ್ ಯೋಜನೆಯಡಿ ಶೌಚಾಲಯಗಳನ್ನು ನಿರ್ಮಿಸಿಕೊಂಡಿರುವ ಸಂಬಂಧ ಹಣ ನೀಡದೆ ಸತಾಯಿಸುತ್ತಿದ್ದರು. ಅಲ್ಲದೆ, ರಾಜೀವ್ ಗಾಂಧಿ ವಸತಿ ಕೇಂದ್ರವನ್ನು ಸ್ಥಾಪಿಸದೆ ನಿರ್ಲಕ್ಷ್ಯ ವಹಿಸಿದ್ದರು. ಗ್ರಾಮದಲ್ಲಿ ಕುಡಿಯುವ ನೀರಿನ ಲಭ್ಯತೆ ಸಾಕಷ್ಟು ಪ್ರಮಾಣದಲ್ಲಿ ಇದ್ದರೂ ಕೂಡ ಜನರಿಗೆ ಸಮರ್ಪಕವಾಗಿ ನೀರು ಕೊಡದೆ ಪಿಡಿಒ ಬೇಜವಾಬ್ದಾರಿ ತಾಳಿದ್ದರು. ಇದು ಇಒ ಸಿಟ್ಟಿಗೆ ಕಾರಣವಾಗಿದೆ. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸದ ಪಿಡಿಒ ಚಂದ್ರು ವಿರುದ್ಧ ಕ್ರಮಜರುಗಿಸುವುದಾಗಿ ಇಒ ತಿಳಿಸಿದ್ದಾರೆ.

# ಭಕ್ತರ ಸಹಾಯದಿಂದ ಸಿದ್ದರಬೆಟ್ಟದಲ್ಲಿ ಶಾಖಾಮಠ

**ಮಧುಗಿರಿ**

ಧಾರ್ಮಿಕ ತಳಹದಿಯಲ್ಲಿ ಜೀವನ ನಡೆಸುವ ಮತ್ತು ಧಾರ್ಮಿಕವಾಗಿ, ಸಾಮಾಜಿಕವಾಗಿ ಜನಜಾಗೃತಿ ಮೂಡಿಸುವ ಉದ್ದೇಶದಿಂದ 11 ವರ್ಷಗಳ ಹಿಂದೆ ಸದ್ಭಕ್ತರ ಸಹಾಯದಿಂದ ಸಿದ್ದರಬೆಟ್ಟದಲ್ಲಿ ಬಾಳೆಹೊನ್ನೂರು ಖಾಸಾ ಶಾಖಾಮಠವನ್ನು ಪ್ರಾರಂಭಿಸಲಾಯಿತು ಎಂದು ಶ್ರೀ ವೀರಭದ್ರಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ವರ್ಷಕ್ಕೊಮ್ಮೆಯಾದರೂ ಭಕ್ತರನ್ನು ಮಠಕ್ಕೆ ಬರಮಾಡಿಕೊಳ್ಳುವ ಉದ್ದೇಶದಿಂದ ಪ್ರತಿವರ್ಷ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದ್ದು, ಜೂ.4ರಂದು ಜಗದ್ಗುರು ರೇಣುಕಾಚಾರ್ಯ ಜಯಂತಿ, ಜಗಜ್ಯೋತಿ ಬಸವೇಶ್ವರ ಜಯಂತಿ, ಜನಜಾಗೃತಿ ಸಮಾವೇಶ ಹಾಗೂ ಉಚಿತ ಸಾಮೂಹಿಕ ವಿವಾಹ ಮಹೋತ್ಸವ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಜೂ.3 ಶನಿವಾರ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಕೃಷಿ ಮತ್ತು ಅರಣ್ಯ ಜಾಗೃತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದ್ದು, ಮಠದ ವತಿಯಿಂದ 5 ಸಾವಿರ ಸಸಿಗಳನ್ನು ಭಕ್ತರಿಗೆ ವಿತರಿಸಲಾಗುವುದು. ಸಸಿಗಳನ್ನು ಉತ್ತಮವಾಗಿ ಬೆಳೆಸಿದವರಿಗೆ ಬಹುಮಾನ ನೀಡಲಾಗುವುದು ಎಂದರು.



ಜೂ. 4 ಭಾನುವಾರ ಬೆಳಿಗ್ಗೆ 10:30 ಕ್ಕೆ ಜನಜಾಗೃತಿ ಧರ್ಮ ಸಮಾರಂಭ ಏರ್ಪಡಿಸಿದ್ದು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಉದ್ಘಾಟಿಸಲಿದ್ದು, ಶಾಸಕ ಪಿ.ಆರ್.ಸುಧಾಕರ್ ಲಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಎಸ್.ಪಿ.ಮುದ್ದಹನುಮೇಗೌಡ, ಎಪಿಸಿಸಿ ಅಧ್ಯಕ್ಷ ಎನ್.ರಘುವೀರರೆಡ್ಡಿ, ವಿ.ಪ ಸದಸ್ಯರಾದ ವಿ.ಸೋಮಣ್ಣ, ಬೆಮೆಲ್ ಕಾಂತರಾಜು, ಮಾಜಿ ಸಂಸದ ಜಿ.ಎಸ್.ಬಸವರಾಜು, ಮಾಜಿ ಸಚಿವ ಸಿ.ಚೆನ್ನಿಗಪ್ಪ, ಶಾಸಕ ಕೆ.ಎನ್.ರಾಜಣ್ಣ, ಜಿ.ಪಂ ಅಧ್ಯಕ್ಷೆ ಲತಾ, ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರುಳೀಧರಹಾಲಪ್ಪ, ತೆಂಗು ಮತ್ತು ನಾರು ಅಭಿವೃದ್ಧಿ ಮಂಡಳಿ ವೆಂಕಟಾಚಲಯ್ಯ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಎಂ.ವಿ.ರುದ್ರಾರಾಧ್ಯ, ಪಿ.ಎಂ.ಸಿದ್ದಬಸಪ್ಪ, ಜಿ.ಸಿದ್ದಗಂಗಪ್ಪ, ವಕೀಲ ಮಂಜುನಾಥಸ್ವಾಮಿ, ಕೇಬಲ್ ಶಶಿಧರ, ಚೆನ್ನಬಸವರಾಜು, ಎಸ್.ಆರ್.ಶ್ರೀಕಂಠಾರಾಧ್ಯ, ಗೌರಮ್ಮ, ನಂಜಮ್ಮ, ವಿಜಯಮ್ಮ, ಲತಾ, ಚನ್ನಬಸವಯ್ಯ, ಹುಚ್ಚಪ್ಪ ಮತ್ತಿತರರು ಉಪಸ್ಥಿತರಿದ್ದರು.

# ನಿರಂತರ ವೈದ್ಯಕೀಯ ಶಿಕ್ಷಣ ಎಲ್ಲ ವೈದ್ಯರಿಗೂ ಅಗತ್ಯ

**ತುಮಕೂರು**

ನಿರಂತರ ವೈದ್ಯಕೀಯ ಶಿಕ್ಷಣ ಎಲ್ಲ ವೈದ್ಯರಿಗೂ ಕಾಲ ಕಾಲಕ್ಕೆ ಉಪಯೋಗವಾಗುವುದರಿಂದ ಉತ್ತಮ ವೈದ್ಯ ಲೋಕವಾಗುತ್ತದೆ. ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಚಿಕಿತ್ಸಾ ವಿಧಾನಗಳಲ್ಲಿ ಪ್ರಯೋಗಾಲಯಗಳ ಪ್ರಾಮುಖ್ಯತೆ ಹಾಗೂ ಪ್ರಯೋಗ ಶಾಲಾ ವರದಿಗಳ ನಿಖರತೆ ಬಗ್ಗೆ ಅಲ್ಲದೆ, ರೋಗಿಗಳಿಗೆ ತಗಲುವ ಅನಗತ್ಯ ಚಿಕಿತ್ಸಾ ವೆಚ್ಚಗಳನ್ನು ತಗ್ಗಿಸುವ ಬಗ್ಗೆ ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ. ಟಿ.ಎ. ವೀರಭದ್ರಯ್ಯನವರು ತಿಳಿಸಿದರು.

ನಗರದ ಶ್ರೀದೇವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಆಸ್ಪತ್ರೆಯ ಸಭಾಂಗಣದಲ್ಲಿ ಮೇ. 30 ರಂದು ಬೆಳಿಗ್ಗೆ 9 ಗಂಟೆಗೆ ಪ್ರಯೋಗಾಲಯ ಔಷಧ ವಿಜ್ಞಾನ ಬಗ್ಗೆ ನಿರಂತರ ವೈದ್ಯಕೀಯ ಶಿಕ್ಷಣ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು ಪ್ರಯೋಗಾಲಯ ಔಷಧ ವಿಜ್ಞಾನದ ಬಗ್ಗೆ (ಸಿ.ಎಂ.ಇ.) ವಿಶೇಷ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಸ್.ಡಿ.ದೇಸಾಯಿರವರು ಮಾತನಾಡುತ್ತಾ ವೈದ್ಯಕೀಯ ಕ್ಷೇತ್ರದಲ್ಲಿ ಪ್ರಯೋಗ ಶಾಲೆಗಳ ಪಾತ್ರ ಅತ್ಯಂತ ಮಹತ್ವದಾಗಿರುತ್ತದೆ ಇಂದಿನ ತಂತ್ರಜ್ಞಾನ ಅತಿ ಬೇಗ ಅಭಿವೃದ್ಧಿ ಹೊಂದಿರುವುದರಿಂದ ವೈದ್ಯಕೀಯ ಉಪಕರಣಗಳ ಸಹ ಉನ್ನತೀಕರಣಗೊಳ್ಳುತ್ತಿವೆ ಆದರ ಬದಲಾದ



ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಿ ನಿರಂತರ ವೈದ್ಯಕೀಯ ಶಿಕ್ಷಣ ಅನಿವಾರ್ಯತೆ ಇರುತ್ತದೆ.

ಕಾಲೇಜಿನ ರೋಗ ನಿರ್ಣಾಯ ಶಾಸ್ತ್ರ, ಜೀವ ರಸಾಯನ ಶಾಸ್ತ್ರ, ಸೂಕ್ಷ್ಮಜೀವ ಶಾಸ್ತ್ರಗಳನ್ನು ಒಳಗೊಂಡು ಇಂದು ಪ್ರಚಲಿತದಲ್ಲಿರುವ ವಿಷಯಗಳು ಈ ಕಾರ್ಯಾಗಾರದ ಪ್ರಯೋಜನ ಮತ್ತು ಉಪಯೋಗ ಒಳಗೊಳ್ಳಬೇಕು. ತಜ್ಞ ವೈದ್ಯರು, ಕಿರಿಯ ವೈದ್ಯರು ಹಾಗೂ ಪ್ರಯೋಗಶಾಲಾ, ತಂತ್ರಜ್ಞರು ಪಡೆಯಬಹುದಾಗಿದೆ. ಈ ಕಾರ್ಯಾಗಾರದಲ್ಲಿ ಆಯ್ಕೆ ಮಾಡಿದ್ದಕ್ಕಾಗಿ ಕಾರ್ಯಕಾರಿ ಸಮಿತಿಯನ್ನು ಅಭಿನಂದಿಸಿದರು.

ಶ್ರೀದೇವಿ ವೈದ್ಯಕೀಯ ಕಾಲೇಜು ವ್ಯವಸ್ಥಾಪಕ ಮಂಡಳಿ ವತಿಯಿಂದ ಡಾ. ಲಾವಣ್ಯ ರಮಣ್ ರವರು ಮಾತನಾಡುತ್ತಾ ಇತಂಹ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿ ಎಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀದೇವಿ ಛಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್‌ರವರು ವಹಿಸಿದ್ದರು, ಶ್ರೀದೇವಿ ಆಸ್ಪತ್ರೆಯ ಡೀನ್ ಡಾ. ಒ.ಎಸ್. ಸಿದ್ದಪ್ಪ, ಕಾರ್ಯಕ್ರಮದ ಸಂಯೋಜಕರಾದ ಡಾ. ಸಿ.ಎ. ಆರತಿ, ಡಾ.ಶ್ರೀಕೃಷ್ಣ ಹಾಗೂ ಡಾ. ಪರಿಮಳರವರು ಉಪಸ್ಥಿತರಿದ್ದರು.

# ತಂಬಾಕು ಸೇವನೆಯಿಂದ ಸಮಾಜದ ಮೇಲೆ ದುಷ್ಪರಿಣಾಮ

**ಚಿಕ್ಕನಾಯಕನಹಳ್ಳಿ**

ಇಂದು ಹೆಚ್ಚು ಯುವ ಜನಾಂಗ ತಂಬಾಕು ಸೇವನೆಗೆ ದಾಸರಾಗುತ್ತಿರುವುದರಿಂದ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಎಂ.ಪ್ರಮೀಳ ಹೇಳಿದರು.

ಪಟ್ಟಣದ ರೋಟರಿ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವಾ ಸಮಿತಿ, ತಾಲ್ಲೂಕು ಕಾನೂನು ಸೇವಾ ಸಮಿತಿ, ರೋಟರಿ ಆಂಗ್ಲ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ, ತಾಲ್ಲೂಕು ಆರೋಗ್ಯ ಇಲಾಖೆ, ವಕೀಲರ ಸಂಘದ ವತಿಯಿಂದ ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ನಡೆದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಮಟ್ಟದಿಂದಲೇ ತಂಬಾಕಿನಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ, ಇಂದಿನ ಯುವ ಜನಕ್ಕೆ ತಂಬಾಕಿನಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ವಹಿಸುವಂತೆ ನಾವುಗಳೆಲ್ಲರೂ ತಿಳಿಹೇಳಬೇಕಾಗಿದೆ ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಣೇಶ್ ಮಾತನಾಡಿ, ಅಂತರಾಷ್ಟ್ರೀಯ ಮಟ್ಟದಲ್ಲಿ ತಂಬಾಕು ಸೇವನೆ ಮಾಡುವವರು ಇಂದು ಶೇ.20% ಮಂದಿ ಇದ್ದಾರೆ, ವಿಶ್ವ ಆರೋಗ್ಯ ಸಂಸ್ಥೆ ವರದಿ ಮಾಡಿರುವ ಪ್ರಕಾರ ಪ್ರತಿ ವರ್ಷ 70ಲಕ್ಷ ಜನರು ಈ ತಂಬಾಕಿನಿಂದ ಮರಣ ಹೊಂದುತ್ತಿದ್ದಾರೆ ಇದು ಹೀಗೆ ಮುಂದುವರೆದರೆ




2030ನೇ ಇಸವಿ ವೇಳೆಗೆ ಒಂದು ಲಕ್ಷ ತಂಬಾಕು ಸೇವಿಸುವವರು ಸಾವನ್ನಪ್ಪಲಿದ್ದಾರೆ, ಈಗಾಗಲೇ ಯುವಕ, ಯುವತಿಯರು ಪ್ರಚೋದನೆ ಮೂಲಕ ತಂಬಾಕು ಸೇವನೆಗೆ ಒಳಗಾಗುತ್ತಿದ್ದಾರೆ ಇದು ತಪ್ಪಬೇಕು, ಈ ಸೇವನೆಯಿಂದ ಅವರ ಆರೋಗ್ಯ ಹಾಳಾಗುವುದಲ್ಲದೆ, ಸಮುದಾಯದ ಮೇಲೂ ದುಷ್ಪರಿಣಾಮ ಬೀರುತ್ತದೆ ಎಂದರು.

ತಂಬಾಕು ಸೇವನೆಯಿಂದ ಸಾಮಾಜಿಕ, ಆರ್ಥಿಕ, ಆರೋಗ್ಯ ಸಮಸ್ಯೆಗಳು ಉದ್ಭವಿಸುತ್ತಿವೆ, ಸಾಮಾಜಿಕವಾಗಿ ತಂಬಾಕು ಸೇವನೆ ಮಾಡುವವರು ಸಮಾಜದಲ್ಲಿ ಜೀವನ ನಿರ್ವಹಣೆ ಮಾಡುವುದು ಕಷ್ಟ, ಅದೇ ರೀತಿ ತಂಬಾಕು ಸೇವನೆಗಾಗಿ ಹಣದ ಖರ್ಚು ಹೆಚ್ಚಿದಂತೆ ಆರ್ಥಿಕ ಸಮಸ್ಯೆಯು ಹೆಚ್ಚಾಗಲಿದೆ ಹಾಗೂ ಆರೋಗ್ಯದ ಮೇಲೆ ಪರಿಣಾಮ ಬೀರಿ ವಿವಿಧ ಮಾರಣಾಂತಿಕ ಕಾಯಿಲೆಗಳು ಆರಂಭವಾಗಲಿವೆ, ತಂಬಾಕಿನಿಂದ ಹೊಗೆಯುಕ್ತ ತಂಬಾಕು, ಹೊಗೆ ರಹಿತ ತಂಬಾಕು ಎಂಬ ಎರಡು ವಿಧದ ತಂಬಾಕಿದ್ದು ಈ ಎರಡೂ ಸಹ ಮನುಷ್ಯನ ಜೀವಕ್ಕೆ ಹಾನಿಕರ ಎಂದರು.

ಕಾರ್ಯಕ್ರಮದಲ್ಲಿ ವಕೀಲ ಜಿ.ಪರಮೇಶ್ವರಯ್ಯ ತಂಬಾಕು ನಿಯಂತ್ರಣ ಕಾನೂನು ಕೋಟ್ಪಾ-2003ರ ಬಗ್ಗೆ ಉಪನ್ಯಾಸ ನೀಡಿದರು.

ಕಾಯಕ್ರಮದಲ್ಲಿ ರೋಟರಿ ಸಂಸ್ಥೆ ಅಧ್ಯಕ್ಷ ಎಂ.ದೇವರಾಜು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರೋಟರಿ ಸಂಸ್ಥೆಯ ಕಾರ್ಯದರ್ಶಿ ಎಂ.ವಿ.ನಾಗರಾಜ್‌ರಾವ್, ವಕೀಲರ ಸಂಘದ ಅಧ್ಯಕ್ಷ ಟಿ.ಆರ್.ಸೋಮಶೇಖರಯ್ಯ, ವಕೀಲ ಹನುಮಂತಯ್ಯ, ಶ್ರೀನಿವಾಸ್, ಮಂಜುಳ, ರೋಟರಿ ಶಾಲೆಯ ಮುಖ್ಯೋಪಾಧ್ಯಾಯ ಬಿ.ಕೆ. ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

# ದಾರಿಗೆ ಅಡ್ಡಲಾಗಿ ಬಿದ್ದಿದ್ದ ಕಲ್ಲುಬಂಡೆ ತೆರವು

>>> 3ನೇ ಪುಟದಿಂದ ಅಪಾಯವಾಗುವ ಎಲ್ಲಾ ಮುನ್ಸೂಚನೆ ಇದ್ದರೂ ಕೆಶಿಪ್ ಅಧಿಕಾರಿಗಳು ಗಾಡ ನಿದ್ದೆಯಲ್ಲಿ ಜಾರಿದ್ದನ್ನ ಪ್ರಜಾಪ್ರಗತಿ ಹಾಗೂ ಪ್ರಗತಿ ಟಿವಿ ಗಾಡ ನಿದ್ದೆಯಿಂದ ಕಣ್ತೆರೆಸಿದೆ ಎನ್ನಬಹುದಾಗಿದೆ.

ಕೆಶಿಪ್ ಸಂಸ್ಥೆಗೆ ತುಮಕೂರು-ಪಾವಗಡ ರಾಜ್ಯ ಹೆದ್ದಾರಿಯ ಗುತ್ತಿಗೆ ಪಡೆದಿದ್ದು, ಕೆಶಿಪ್ ನವರು ಸದ್ಭವ್ ಕಂಪನಿಗೆ ಕಾಮಗಾರಿಯ ನಿರ್ವಹಣೆಯ ಜವಾಬ್ದಾರಿ ನೀಡಿದ್ದು, ಸದ್ಭವ್ ಕಂಪನಿಯಿಂದ ಕೊರಟಗೆರೆ ಸಮೀಪದ ಜಂಪೇನಹಳ್ಳಿ ಬಳಿ ಕನ್ನಯ್ಯನ ಗುಟ್ಟೆ ಕೊರೆದು ರಸ್ತೆ ನಿರ್ಮಿಸಲಾಗಿದ್ದು, ರಸ್ತೆ ಕೊರೆದಂತಹ ಸಂದರ್ಭದಲ್ಲಿ ದೊಡ್ಡ-ದೊಡ್ಡ ಬಂಡೆಗಳನ್ನು ಹೊಡೆದು ರಸ್ತೆ ನಿರ್ಮಿಸಿದರಾದರೂ ಉಳಿಕೆ ಬಂಡೆಗಳನ್ನು ತೆರವುಗೊಳಿಸದೆ ಬೇಜವಾಬ್ದಾರಿಯಿಂದ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದು, ಈಗ ಆ ತೆರವುಗೊಳಿಸದ ಬಂಡೆಗಳು ಮಳೆಬಂದಂತಹ ಸಂದರ್ಭದಲ್ಲಿ ರಸ್ತೆಗೆ ಉರುಳಿ ಬೀಳುತ್ತಿದ್ದು, ಒಂದು ವೇಳೆ ದೊಡ್ಡ ಗಾತ್ರದ ಬಂಡೆ ಉರುಳುವ ಸಂದರ್ಭದಲ್ಲಿ ರಸ್ತೆಯಲ್ಲಿ ಯಾವುದೇ ವಾಹನಗಳು ಸಂಚರಿಸುತ್ತಿದ್ದರೂ ಊಹಿಸಲಾಗದ ದುರ್ಘಟನೆ ಜರುಗಲಿದ್ದು ಈ ಹಿಂದೆ ಹಿಂದೂಪುರದ ಪೆನಗೊಂಡ ಬಳಿ ಸಂಚರಿಸುತ್ತಿದ್ದ ರೈಲಿಗೆ ಇದೇ ಮಾದರಿಯ ಕಲ್ಲು ಬಂಡೆಗಳು ಉರುಳಿ ಬಿದ್ದು ಬಾರಿ ಅವಘಡ ಸಂಭವಿಸಿದ ಮಾದರಿಯಲ್ಲಿಯೇ ಈ ಭಾಗದಲ್ಲೂ ಮುಂದೊಂದು ದಿನ ಅವಘಡ ಸಂಭವಿಸಲಿದೆ ಎಂದು ಸಾರ್ವಜನಿಕರು ಸದ್ಭವದ ವಿರುದ್ಧ ಆಕ್ರೋಶ ವ್ಯಕ್ತಪಡಿಸುವ ಸಂದರ್ಭದಲ್ಲಿ ಪ್ರಜಾಪ್ರಗತಿ ಹಾಗೂ ಪ್ರಗತಿ ಟಿವಿ ಸುದ್ದಿ ಪ್ರಸಾರವಾದ ಬಳಿಕ ಎಚ್ಚೆತ್ತುಕೊಂಡು ತೆರವು ಕಾರ್ಯಾಚರಣೆ ನಡೆಸುತ್ತಿರುವುದು ಸಾರ್ವಜನಿಕರಲ್ಲಿ ನೆಮ್ಮದಿ ನಿಟ್ಟುಸಿರು ಬಿಟ್ಟಂತಾಗಿದೆ.

ಸುರಂಗ ಮಾದರಿಯಲ್ಲಿ ಬೆಟ್ಟ ಕೊರೆದು ರಾಜ್ಯ ಹೆದ್ದಾರಿ ನಿರ್ಮಿಸಿರುವ ಕೆಶಿಪ್ ಸಂಸ್ಥೆ ಮುಂದಿನ ಭವಿಷ್ಯದ ದೃಷ್ಟಿಕೋನವಿಟ್ಟುಕೊಂಡು ರಸ್ತೆಯ ಎರಡು ಬದಿಯ ಮಣ್ಣು, ದೊಡ್ಡ-ದೊಡ್ಡ ಬಂಡೆಕಲ್ಲುಗಳು ಹಾಗೂ ಬೃಹದಾಕಾರವಾದ ಮರಗಳನ್ನು ತೆರವುಗೊಳಿಸಿ ಮುಂದಿನ ದಿನಗಳಲ್ಲಿ ಎಷ್ಟೇ ಮಳೆ ಗಾಳಿ ಬಂದರೂ ಈ ಮಾರ್ಗದಲ್ಲಿ ಯಾವುದೇ ಅವಘಡ ನಡೆಯದ ರೀತಿಯಲ್ಲಿ ತೆರವು ಕಾರ್ಯಾಚರಣೆ ಮಾಡುವ ಮೂಲಕ ಸಾರ್ವಜನಿಕ ಹಿತದೃಷ್ಟಿ ಕಾಪಾಡಬೇಕೆಂಬುದು ಸಾರ್ವಜನಿಕರ ಆಶಯವಾಗಿದೆ.

**ಕೆಶಿಪ್‌ನಿಂದ ತಂಗುದಾಣ ನಿರ್ಮಾಣವಾಗಲಿ:** ಕಳೆದ 1 ವರ್ಷದ ಹಿಂದೆ ಜಂಪೇನಹಳ್ಳಿ ಕ್ರಾಸ್ ಬಳಿಯಲ್ಲಿ ಬಸ್‌ನಿಲ್ದಾಣ ಸೇರಿದಂತೆ ತಮ್ಮ ಗ್ರಾಮಗಳಿಗೆ ಪ್ರಯಾಣಿಸಲು ಸಮರ್ಪಕವಾದ ವಾಹನಗಳ ವ್ಯವಸ್ಥೆ ಇತ್ತು. ಕೆಶಿಪ್ ಅಧಿಕಾರಿಗಳು ಅವೈಜ್ಞಾನಿಕವಾಗಿ ರಾಜ್ಯಹೆದ್ದಾರಿಯ ರಸ್ತೆ ನಿರ್ಮಾಣ ಮಾಡಿರುವ ಹಿನ್ನೆಲೆಯಲ್ಲಿ ಈ ಮಾರ್ಗದಲ್ಲಿ ತಂಗುದಾಣವಿಲ್ಲದ ಕಾರಣ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದು, ರಾತ್ರಿಯಾಗುತ್ತಿದ್ದಂತೆ 7 ಗಂಟೆಯ ನಂತರ ಮುಖ್ಯರಸ್ತೆಯಿಂದ ಜಂಪೇನಹಳ್ಳಿಯ ರಸ್ತೆಗೆ ಕತ್ತಲಲ್ಲಿ ಪ್ರಯಾಣಿಕರು ಪ್ರಯಾಣಿಸುತ್ತಿದ್ದು ತಂಗುದಾಣ ಸೇರಿದಂತೆ ಜಂಪೇನಹಳ್ಳಿಯ ಕ್ರಾಸ್‌ವರೆಗೂ ಮಹಿಳಾ ಪ್ರಯಾಣಿಕರ ಹಿತದೃಷ್ಟಿಯಿಂದ ಕೆಲವು ಕಡೆ ಬೀದಿ ದೀಪಗಳನ್ನು ಅಳವಡಿಸಿದರೆ ಪ್ರಯಾಣಿಕರು ನಿರ್ಭೀತಿಯಿಂದ ಸಂಚರಿಸಬಹುದು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

# ಪಾರ್ವತಮ್ಮ ರಾಜ್‌ಕುಮಾರ್ ನಿಧನಕ್ಕೆ ಶ್ರದ್ಧಾಂಜಲಿ

**ತುರುವೇಕೆರೆ**

ಡಾ. ರಾಜ್‌ಕುಮಾರ್‌ರವರ ಯಶಸ್ಸಿನ ಒಂದು ಭಾಗವೇ ಆಗಿದ್ದ ಪಾರ್ವತಮ್ಮರವರು ಪ್ರತಿ ಯಶಸ್ವಿ ಪುರುಷನ ಹಿಂದೆ ಓರ್ವ ಮಹಿಳೆ ಇರುತ್ತಾಳೆ ಎಂಬ ನಾಣ್ಣುಡಿಗೆ ಪಾರ್ವತಮ್ಮರವರು ಉದಾಹರಣೆಯಾಗಿದ್ದರು ಎಂದು ಶಿವಶಕ್ತಿ ಕಲಾವಿದರ ಒಕ್ಕೂಟದ ಅಧ್ಯಕ್ಷರಾದ ಅಮಾನಿಕೆರೆ ಮಂಜುನಾಥ್ ಅಭಿಪ್ರಾಯಪಟ್ಟರು.

ಚಿತ್ರ ನಿರ್ಮಾಪಕಿ ಪಾರ್ವತಮ್ಮರಾಜ್‌ಕುಮಾರ್ ಅನಾರೋಗ್ಯ ನಿಮಿತ್ತ ನಿಧನರಾದ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀ ಸತ್ಯಗಣಪತಿ ಆಸ್ಥಾನಮಂಟಪದಲ್ಲಿ ತಾಲ್ಲೂಕು ಕ.ಸಾ.ಪ., ಕಲಾವಿದರುಗಳ ಒಕ್ಕೂಟ, ಕಾರ್ಮಿಕರ ಸಂಘ, ವಿವಿಧ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಲಾವಿದರುಗಳನ್ನು ವಿಶೇಷವಾಗಿ ಆತ್ಮೀಯತೆ ತೋರುತ್ತಿದ್ದ ವ್ಯಕ್ತಿತ್ವ ಪಾರ್ವತಮ್ಮರಾಜ್‌ಕುಮಾರ್‌ರವರಲ್ಲಿತ್ತು. ಸಿನಿಮಾರಂಗವಲ್ಲದೆ ಅನೇಕ ಸಮಾಜ ಸೇವಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. ಇವರು ಸಂಸ್ಥೆಯನ್ನು ಕಟ್ಟಿ ಅನೇಕ ಸದಭಿರುಚಿಯ ಚಲನಚಿತ್ರಗಳನ್ನು ನಿರ್ಮಿಸಿ ವಿತರಿಸಿದಷ್ಟು ಬೇರೆ ಯಾವ ನಿರ್ಮಾಪಕರು ಮಾಡಿಲ್ಲಾ ಎಂದು ತಿಳಿಸಿದರು.

ಸಾಹಿತಿ ತುರುವೇಕೆರೆ ಪ್ರಸಾದ್ ಮಾತನಾಡಿ ಗ್ರಾಮೀಣ ಪ್ರದೇಶದಿಂದ ಬಂದ ಮಹಿಳೆಯೋರ್ವಳು ಚಿತ್ರರಂಗದಲ್ಲಿ ತನ್ನದೇ



ಆದ ಛಾಪು ಮೂಡಿಸಿ ಕನ್ನಡಿಗರಿಗೆ ವಿಶಿಷ್ಟ ಚಲನ ಚಿತ್ರಗಳನ್ನು ನೀಡಿದ್ದಾರೆ. ಕಾದಂಬರಿಗಳನ್ನು ಓದುವ ಅಭ್ಯಾಸ ಹೊಂದಿದ್ದ ಇವರು ನಾಡಿನ ಸಂಸ್ಕೃತಿಗೆ ಹೋಲುವಂತಹ ಕಥೆಗಳನ್ನು ಆಯ್ಕೆಮಾಡಿ ಹೊಸ ಹೊಸ ನಟ ನಟಿಯರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಕಸಾಪ ತಾಲ್ಲೂಕು ಅಧ್ಯಕ್ಷ ನಂ.ರಾಜು, ಗ್ರಾಮಾಂತರ ಕಲಾವಿದರ ಸಂಘದ ಅಧ್ಯಕ್ಷ ಟಿ.ಎಸ್.ಬೋರೇಗೌಡ, ಟಿ.ಎನ್.ಸತೀಶ್, ಪ್ರಹ್ಲಾದ್ ಪಾರ್ವತಮ್ಮರ ಬಗ್ಗೆ ತಿಳಿಸಿದರು. ಈ ಸಂದರ್ಭದಲ್ಲಿ ಪಾರ್ವತಮ್ಮರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಒಂದು ನಿಮಿಷ ಮೌನ ಆಚರಿಸಿದರು. ಸಭೆಯಲ್ಲಿ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್, ಬ್ಯಾಂಕ್ ಮೂಡಲಗಿರಿಯಪ್ಪ, ಸಿಐಟಿಯುನ ಸತೀಶ್, ಶಿವನಂಜಪ್ಪ, ಮಂಜುಳ, ಶಿಕ್ಷಕಿ ಗುರುಸಿದ್ದಮ್ಮ, ರಂಗನಾಥ್, ಶಿವರಾಮ್, ವೆಂಕಟೇಶ್, ಹುಚ್ಚಪ್ಪ ಸೇರಿದಂತೆ ಅನೇಕರು ಇದ್ದರು.

> **ಗ್ರಾಮೀಣ ಪ್ರದೇಶದಿಂದ ಬಂದ ಮಹಿಳೆಯೋರ್ವಳು ಚಿತ್ರರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿ ಕನ್ನಡಿಗರಿಗೆ ವಿಶಿಷ್ಟ ಚಲನ ಚಿತ್ರಗಳನ್ನು ನೀಡಿದ್ದಾರೆ. ಕಾದಂಬರಿಗಳನ್ನು ಓದುವ ಅಭ್ಯಾಸ ಹೊಂದಿದ್ದ ಇವರು ನಾಡಿನ ಸಂಸ್ಕೃತಿಗೆ ಹೋಲುವಂತಹ ಕಥೆಗಳನ್ನು ಆಯ್ಕೆಮಾಡಿ ಹೊಸ ಹೊಸ ನಟಿಯರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು**

# ಮೈನಿಂಗ್ ಪ್ರಕರಣ : ಯಾವುದೇ ತನಿಖೆಗೂ ಸಿದ್ಧ

**ತುಮಕೂರು**

ಜಂತಕಲ್ ಮೈನಿಂಗ್ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರಾಗಲಿ ಅಥವಾ ನಾನಾಗಲಿ ಅಕ್ರಮವೆಸಗಿಲ್ಲ,ಈ ಸಂಬಂಧ ಯಾವುದೇ ತನಿಖೆಗೂ ಸಿದ್ಧ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಹಾಗು ಮಾಜಿ ಸಚಿವ ಸಿ.ಚನ್ನಿಗಪ್ಪ ತಿಳಿಸಿದ್ದಾರೆ.

ತುಮಕೂರು ಗ್ರಾಮಾಂತರ ಕ್ಷೇತ್ರದ ನಿಡವಳಲು ಗ್ರಾಮದಲ್ಲಿ ನಡೆದ ಜೆಡಿಎಸ್ ಸೇರ್ಪಡೆ ಹಾಗು ಲಕ್ಷ್ಮೀದೇವಿ ಗ್ರಾಮಾಭಿವೃದ್ಧಿ ಸಂಘದ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಜಂತಕಲ್ ಮೈನಿಂಗ್ ವಿಚಾರಕಾಗಿ ಕಾನೂನು ರೀತಿಯಲ್ಲಿ ಕೆಲಸ ಮಾಡಿ ಮಾಡಿ ಎಂದು ಕುಮಾರಸ್ವಾಮಿಯವರು ಪತ್ರ ಬರೆದಿದ್ದರು ಅಷ್ಟೇ, ಆದರೆ ಇತ್ತೀಚೆಗೆ ಕುಮಾರಸ್ವಾಮಿಯವರ ಜನಪ್ರಿಯತೆಯನ್ನ ಸಹಿಸದ ಪ್ರತಿಪಕ್ಷಗಳು ಇನ್ನಿಲ್ಲದ ಹುನ್ನಾರ ನಡೆಸಿವೆ ಎಂದು ಆರೋಪಿಸಿದರು.

ನಾಡಿನ ಆರುವರೆ ಕೋಟಿ ಜನರ ಆಶೀರ್ವಾದ ಇರೋವರೆಗೂ ಮಾಜಿ ಸಿಎಂ ಕುಮಾರಸ್ವಾಮಿಯವರನ್ನ ಪ್ರತಿಪಕ್ಷಗಳು ಏನು ಮಾಡುವುದಕ್ಕೆ ಆಗಲ್ಲ, ನಾಡಿನೆಲ್ಲಡೆ ಕುಮಾರಪರ್ವ ಆರಂಭವಾಗಿದ್ದು ಕಾಂಗ್ರೆಸ್ ಬಿಜೆಪಿ ನಡುಕ ಆರಂಭವಾಗಿದೆ ಈ ನಾಡಿನಲ್ಲಿ ತುಳಿತಕ್ಕೊಳಗಾದವರಿಗೆ, ರೈತರಿಗೆ ಸಮಯಕ್ಕೆ ಸರಿಯಾಗಿ ಸ್ಪಂದಿಸುವ ವ್ಯಕ್ತಿ ಕುಮಾರಸ್ವಾಮಿ, ಈ ನಿಟ್ಟಿನಲ್ಲಿ ಜನತೆ ಈ ಬಾರಿ ಜೆಡಿಎಸ್ ಬೆಂಬಲಿಸುವಂತೆ ಮನವಿ ಮಾಡಿದರು.

ತುಮಕೂರು ಗ್ರಾಮಾಂತರ ಕ್ಷೇತ್ರದ ಬಡ ವಿದ್ಯಾರ್ಥಿಗಳಿಗೆ ನೆರವಾಗುವ ದೃಷ್ಟಿಯಿಂದ ತಮ್ಮ ಡಾ.ಶಿವಕುಮಾರಸ್ವಾಮಿ ವಿದ್ಯಾಸಂಸ್ಥೆಯಲ್ಲಿ



ಡಿಪ್ಲೊಮೋ, ಬಿಇ, ಎಂಇ ಎಂಟೆಕ್ ಮಾಡಲು 100 ಮಂದಿಗೆ ಉಚಿತ ಅವಕಾಶ ಕಲ್ಪಿಸಲಾಗುವುದು ಎಂದು ಪ್ರಕಟಿಸಿದರು.

ಸಮಾರಂಭದ ಅಧ್ಯಕ್ಷತೆವಹಿಸಿ ಮಾತನಾಡಿದ ಮಾಜಿ ಶಾಸಕ ಡಿ.ಸಿ.ಗೌರಿಶಂಕರ್ ಜಿಲ್ಲೆಗೆ ಬರುವ ಅಲ್ಪಸ್ವಲ್ಪ ಹೇಮಾವತಿ ನೀರಿನಲ್ಲಿ ಅಕ್ಕಪಕ್ಕದ ಕ್ಷೇತ್ರಗಳ ಶಾಸಕರು ಹೋರಾಟ ಮಾಡಿ ತಮ್ಮ ಕೆರೆಕಟ್ಟೆಗಳಿಗೆ ನೀರು ಬಿಡಿಸಿಕೊಳ್ಳುತ್ತಾರೆ. ಆದರೆ ಗ್ರಾಮಾಂತರದ ಬಿಜೆಪಿ ಶಾಸಕ ಸುರೇಶ್‌ಗೌಡ ಬೇಜವಬ್ದಾರಿತನ ತೋರಿದ ಪರಿಣಾಮ ನಮ್ಮ ಜನಜಾನುವಾರುಗಳು ತತ್ತರಿಸುವಂತಾಗಿದೆ ಎಂದು ಆರೋಪಿಸಿದರು.

ಗ್ರಾಮಾಂತರ ಕ್ಷೇತ್ರದಲ್ಲಿ ಜೆಡಿಎಸ್ ಪರ ಅಲೆ ಎದ್ದಿದ್ದು ಮುಂಬರುವ ಡಿಸೆಂಬರ್ ತಿಂಗಳಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎರಡು ದಿನಗಳ ಕಾಲ ಪ್ರವಾಸ ಕೈಗೊಳ್ಳಲಿದ್ದಾರೆ. ಕ್ಷೇತ್ರದ ಕುಗ್ರಾಮವೊಂದರಲ್ಲಿ ಗ್ರಾಮ ವಾಸ್ತವ್ಯ ಮಾಡಿ ಪ್ರತಿ ಪಮಚಾಯ್ತಿ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ಮಾಡಲಿದ್ದಾರೆ. ಈ ನಿಟ್ಟಿನಲ್ಲಿ ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್ ಬಿಜೆಪಿ ಸರ್ಕಾರದ ವೈಫಲ್ಯಗಳನ್ನ ಎತ್ತಿಹಿಡಿದು ಕುಮಾರಸ್ವಾಮಿಯವರ ಜನಪರ ಯೋಜನೆಗಳನ್ನ ಮತದಾರರಿಗೆ ಮನವರಿಕೆ ಮಾಡಿಕೊಡುವಂತೆ ಕರೆ ನೀಡಿದರು.

ವಿಧಾನಪರಿಷತ್ ಸದಸ್ಯ ರಮೇಶ್ ಬಾಬು ಮಾತನಾಡಿ ಕಾಂಗ್ರೆಸ್ ಮತ್ತು ಬಿಜೆಪಿ ಸಾಲ ಮನ್ನಾ ವಿಚಾರದಲ್ಲಿ ಪರಸ್ಪರ ಕೆಸರೆರಚಾಟದಲ್ಲಿ ತೊಡಗಿವೆ. ಆದರೆ ಅಧಿಕಾರಕ್ಕೆ ಬಂದ 24 ಘಂಟೆಯಲ್ಲಿ ರೈತರ ಸಂಪೂರ್ಣ ಸಾಲ ಮನ್ನಾ ಮಾಡುವುದಾಗಿ ಕುಮಾರಸ್ವಾಮಿ ತಿಳಿಸಿದ್ದಾರೆ. ಈ ನಿಟ್ಟಿನಲ್ಲಿ ರೈತಪರ ಜೆಡಿಎಸ್ ಪಕ್ಷ ಬೆಂಬಲಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಆರ್.ಸಿ.ಆಂಜಿನಪ್ಪ, ಮಾಜಿ ಶಾಸಕ ಗಂಗಹನುಮಯ್ಯ,ತಾಲ್ಲೂಕು ಅಧ್ಯಕ್ಷ ಡಾ.ಕುಮಾರ್, ಯುವ ಜೆಡಿಎಸ್ ಅಧ್ಯಕ್ಷ ಬೆಳ್ಳಿ ಲೋಕೇಶ್, ಕಾರ್ಯಾಧ್ಯಕ್ಷ ಹಿರೇಹಳ್ಳಿ ಮಹೇಶ್, ಗ್ರಾಮಾಂತರ ಯುವ ಅಧ್ಯಕ್ಷ ಸುವರ್ಣಗಿರಿ ಕುಮಾರ್, ಮುಖಂಡರಾದ ಡಿ.ಸಿ.ವೇಣುಗೋಪಾಲ್, ನಾಗವಲ್ಲಿ ರಾಮು, ಹರಳೂರು ಸುರೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

CMYK CMYK CMYK CMYK
31.05.2017.indd 5 6/1/2017 12:15:20 AM